‘ಥೂತ್ತೇರಿಕೆ! ಅಲ್ಲ ಕಣೋ ಮರೀ... ಅವಾಗ್ಲೇ ಹೇಳಕಾಗ್ತಿರಲಿಲ್ಲವಾ? ಕ್ಯಾಪನ್ನ ಕೈಯಲ್ಲಿ ಹಿಡುಕೊಂಡು ಕೂತ್ಕಬಾರ್ದಾ? ಹೋಗ್ಲಿ ಬಾ, ಸದ್ಯ ನಾನು ಓಡಿಸೋ ಸ್ಪೀಡಿಗೆ ನೀನೂ ಹಾರಿಹೋಗಲಿಲ್ಲವಲ್ಲಾ ಅದೇ ಪುಣ್ಯ...’ ಎಂದು ನಕ್ಕು ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಳ್ಳುತ್ತಾ ನನ್ನನ್ನು ರಿವರ್ಸು ಕರೆದುಕೊಂಡು ಹೊರಟರು.

ಹೇಳಬೇಕೆಂದರೆ ರೋಲ್‌ಕಾಲ್ ಬಗ್ಗೆ ಸಿಬ್ಬಂದಿಗೆ ಇದ್ದ ಪೂರ್ವಗ್ರಹಗಳನ್ನು ಹೊಡೆದೋಡಿಸಿದ್ದೇ ಚಿತ್ತರಂಜನ್ ಸಾಹೇಬರು. ಬೆಳಗ್ಗೆ ಆರೂವರೆಗೆಲ್ಲಾ ಸರ್ಕಾರಿ ಶಾಲಾ ಮೈದಾನದಲ್ಲಿ ಎಲ್ಲರೂ ರೋಲ್‌ಕಾಲಿಗೆ ಬರಬೇಕು ಅಂತ ಆದೇಶವಾದರೆ ಸಿಬ್ಬಂದಿಗಳು ತಮ್ಮತಮ್ಮಲ್ಲೇ ಕುಶಲೋಪರಿ ಮಾತನಾಡಿಕೊಳ್ಳುತ್ತಲೋ, ಇಲ್ಲ ತಾವು ಮಾಡಿಕೊಂಡ ಸಾಲಗಳ ಬಗ್ಗೆ ಚರ್ಚೆ ಮಾಡುತ್ತಲೋ, ಬರಬೇಕಾದ ಅರಿಯರ್ಸ್ ಬಗ್ಗೆ ವಾದಗಳನ್ನು ಮಂಡಿಸುತ್ತಲೋ, ಕಾಯಿಲೆಗೆ ಈಡಾಗಿ ಮೊನ್ನೆ ಆಸ್ಪತ್ರೆ ಸೇರಿದ ತಮ್ಮ ಸಹೋದ್ಯೋಗಿ ಬಗ್ಗೆ ಅನುಕಂಪ ವ್ಯಕ್ತಪಡಿಸುತ್ತಲೋ ಹೆಜ್ಜೆಗಳನ್ನೆಣಿಸಿಕೊಂಡು ನಿಧಾನವಾಗಿ ಎಂಟುಗಂಟೆಯ ಸುಮಾರಿಗೆ ಮೈದಾನ ತಲುಪಿಕೊಳ್ಳುತ್ತಿದ್ದರು. ಕೆಲವರು ಬೆಳ್ಳಬೆಳಗ್ಗೆ ಮನೆಯಲ್ಲಿ ಟಿಫಿನ್ನು ತಿನ್ನಲಾಗದೆ ಬಾಕ್ಸುಗಳನ್ನು ಕಟ್ಟಿಕೊಂಡು ಬಂದು ಮೈದಾನದಲ್ಲಿ ಕುಳಿತು ಬುತ್ತಿ ಬಿಚ್ಚುತ್ತಿದ್ದರು. ಇನ್ನು ಕೆಲವರು ಅವರಿವರಿಂದ ನೀರಿನ ಬಾಟಲಿ ಕೇಳಿ ಇಸಿದುಕೊಂಡು ಬೀಪಿ ಶುಗರಿನ ಮಾತ್ರೆಗಳನ್ನು ನುಂಗುತ್ತಿದ್ದರು.

ಬಸ್ಸಿನಲ್ಲಿ ಕರ್ಚೀಫು ಹಾಕಿ ಸೀಟು ರಿಸರ್ವು ಮಾಡುತ್ತೇವಲ್ಲಾ? ಹಾಗೆ ಕೆಲವು ಚಾಲಾಕಿ ಸಿಬ್ಬಂದಿಗಳು ತಾವು ಬಂದಿರುವುದರ ಪ್ರತೀಕವಾಗಿ ತಮ್ಮ ಚೀಲ ಹಾಗೂ ಲಾಠಿಗಳನ್ನು ತಮ್ಮ ಪರವಾಗಿ ಹಾಜರಿ ಹಾಕಲು ಬಿಟ್ಟು ಕಾಫಿ ಟೀ ಹೋಟೆಲುಗಳನ್ನು ಹುಡುಕಿಕೊಂಡು ಹೋಗಿಬಿಡುತ್ತಿದ್ದರು. ಯಾರಾದರೂ ಆಫೀಸರು ಬಂದು ‘ಎಷ್ಟೊತ್ತಿಗಯ್ಯಾ ಬರೋದು? ನಿಮಗೇನು ಟೈಂ ಸೆನ್ಸು ಇದೆಯಾ ಇಲ್ವಾ?... ಅಂತ ಗದರಿದರೆ ‘ಏನ್ ಸಾರ್ ಹಿಂಗಂತೀರಿ? ನಾವು ಬೆಳಗ್ಗೆಯೇ ಬಂದು ಕಾಯ್ತಾ ಕುಳಿತಿದ್ದಿವಿ. ಬೇಕಾದ್ರೆ ನಮ್ಮ ಚೀಲ ಲಾಟಿಗಳು ಇಲ್ಲೇ ಇವೆ ನೋಡ್ಕಳಿ...’ ಅಂತ ಅವನ್ನು ಸಾಕ್ಷ್ಯಗಳನ್ನಾಗಿ ಮಾಡಿ ಬಚಾವಾಗುತ್ತಿದ್ದರು.

ಸಾಹೇಬರು ಬಂದ ನಂತರದಲ್ಲಿ ಈ ಆಟಗಳಿಗೆಲ್ಲಾ ಬ್ರೇಕು ಬಿದ್ದಿತು. ಬೆಳಗ್ಗೆ ಆರೂವರೆ ಗಂಟೆ ಅಂದರೆ ಆ ಸಮಯಕ್ಕೆ ಇನ್ನೂ ಐದು ನಿಮಿಷ ಬಾಕಿ ಇರುವಂತೆಯೇ ಸಾಹೇಬರ ಜೀಪು ದೂಳೆಬ್ಬಿಸುತ್ತಾ ಮೈದಾನಕ್ಕೆ ಎಂಟ್ರಿ ಕೊಡುತ್ತಿತ್ತು. ಒಳಗೆ ಕೂತು ಲೂಸಾಗಿರುತ್ತಿದ್ದ ತಮ್ಮ ಬೆಲ್ಟನ್ನು ಕೊಂಚ ಎಡಬಲಕ್ಕೆ ತಿರುಗಿಸುತ್ತಾ ಸೊಂಟದಿಂದ ಸ್ವಲ್ಪ ಮೇಲಕ್ಕೇರಿಸಿಕೊಂಡು ಸಾಹೇಬರು ತಮ್ಮದೇ ಆದ ಸ್ಟೈಲಿನಲ್ಲಿ ಇಳಿಯುತ್ತಿದ್ದುದು ಎಲ್ಲರ ಕಣ್ಣು ಕುಕ್ಕುತ್ತಿತ್ತು. ಹಾಗೆ ಇಳಿದವರು ಒಮ್ಮೆ ಮೈದಾನವನ್ನು ಕಣ್ಣಿನಲ್ಲೇ ಅಳೆದು, ಭುಜದ ಎಡಭಾಗದಲ್ಲಿ ಸಿಕ್ಕಿಸಿಕೊಂಡಿರುತ್ತಿದ್ದ ವಿಷಲ್ ಗಾರ್ಡು ಹೊರತೆಗೆದವರೇ ಸೀಟಿ ಊದಿದರೆಂದರೆ ಸಾಕೇಸಾಕು, ಮೈದಾನದಲ್ಲಿ ಅಲ್ಲಲ್ಲೇ ಹರಡಿದಂತೆ ಅಡ್ಡಾಡಿಕೊಂಡಿರುತ್ತಿದ್ದ ಸಿಬ್ಬಂದಿಗಳೆಲ್ಲಾ ದುಡುದುಡು ಓಡುತ್ತಾ ಬಂದು ‘ಇನ್‌ಟ್ರೀಸ್’ನಲ್ಲಿ ಸಾಲಾಗಿ ನಿಲ್ಲುತ್ತಿದ್ದ ಆ ಮನಮೋಹಕ ದೃಶ್ಯವನ್ನು ನೋಡಿ ಧನ್ಯರಾಗುವುದಕ್ಕೆ ಮೈದಾನದಲ್ಲಿ ಆಟವಾಡಿಕೊಂಡಿರುತ್ತಿದ್ದ ಪಡ್ಡೆಹೈಕಳುಗಳು, ಮೈಮುರಿದು ದುಡಿಯಲಾರದೆ ಕಾಲಕಳೆಯಲೆಂದೇ ಬಂದಂಥ ಹುಟ್ಟು ಸೋಮಾರಿಗಳು, ಸಂಗಾತಿಗಳನ್ನು ಹುಡುಕಿಕೊಂಡು ಅಂಡಲೆಯುತ್ತಿರುವ ಶ್ವಾನ ಸಂತತಿಗಳು ಸಾಲುಗಟ್ಟಿ ನಿಲ್ಲುತ್ತಿದ್ದವು.

ಎಲ್ಲರೂ ತಯಾರಾಗಿ ನಿಂತ ಮೇಲೆ ಅವರವರು ಮಾಡಬೇಕಾದ ಬಂದೋಬಸ್ತು ಡ್ಯೂಟಿಯನ್ನು ಅಲ್ಲಲ್ಲೇ ತಿಳಿಸಿಹೇಳುತಿದ್ದ ಸಾಹೇಬರು ಅರ್ಧಗಂಟೆ ಮುಗಿಯುವುದರೊಳಗಾಗಿ